ಶ್ರೇಷ್ಠವೆನಿಸಿದ ಕುದುರೆಯನ್ನು ತರಿಸಿದನು. ಅದನ್ನು ಏರಿದ ನಳನ ಕಾಲಿನ ಹಿಮ್ಮಡಿಯ ಸನ್ನೆಗೆ ಆ ಕುದುರೆ ಕುಣಿಯಿತು. ಮುಂದಿನ ಕಾಲುಗಳನ್ನು ಜೋಡಿಸಿ ನೆಲ ಒದೆದು ಚಿಮ್ಮಿ ನೆಗೆಯಿತು. ವಾಯು ವೇಗದಲ್ಲಿ ಓಡಿತು. ಕೈಯ ಕಡಿವಾಣವನ್ನು ಸಡಿಲ ಬಿಡಲು ಹುರುಪು ಉತ್ಸಾಹದಿಂದ ಗಮನವನ್ನು ಮುಂದಕ್ಕೆ ಹರಿಸಿ ಸಂಭ್ರಮದಿಂದ ಕೆಂಧೂಳಿ ಎಬ್ಬಿಸಿತು. ಆ ಧೂಳು ಆಕಾಶವನ್ನು ಆವರಿಸಿತು. ಧರಣಿ ತಲ್ಲಣಗೊಂಡಿತು. ಗಗನದಲ್ಲಿ ದೇವತೆಗಳು ಕೊಂಡಾಡಿದರು.

'ಈತ ರಾವುತರ ಅರಸ. ಭಲಾ! ಭಲಾ! ಬಾಪ್ಪುರೇ!' ಎಂದು ಅಲ್ಲಿ ನೆರೆದಿದ್ದ ಸಮಸ್ತಜನ ಸಂತೋಷದಿಂದ ಕೂಗಿ ಮೆಚ್ಚುಗೆ ವ್ಯಕ್ತಿಪಡಿಸಿದರು.

ನಳನು ಹಿಂದಿರುಗಿ ಬರುವುದಕ್ಕಾಗಿ ಕುದುರೆಯನ್ನು ಹಿಮ್ಮಡಿಯಿಂದ ಸಂಜ್ಞೆ ಮಾಡಿ ಹಪರಳಿಸಲು ಅದು ಅತಿ ವೇಗದಲ್ಲಿ ತಿರುಗಿತು. ಅದು ಜೋರಾಗಿ ಓಡಿ ಬರುತ್ತ ಆಯಾಸಗೊಂಡು ಪಕ್ಕಕ್ಕೆ ಸಾಗುತ್ತ ಕಿರು ಬೆವರು ಸೂಸುವುದನ್ನು ಕಂಡು ನಿಲ್ಲಿಸಿದನು. ಅದರಿಂದಿಳಿದು ಋತುಪರ್ಣ ರಾಜನಿಗೆ ಕೈ ಮುಗಿದನು. ರಾಜನು ಮೆಚ್ಚಿ ಆಭರಣಗಳನ್ನು ನೀಡಿ, ಉತ್ತಮ ಸಂಬಳವನ್ನು ಕೊಟ್ಟು ಸೇವೆಗೆ ನೇಮಿಸಿಕೊಂಡನು.

ಧರ್ಮರಾಜನೇ ಕೇಳು. ಬಾಹುಕನಿಗೆ ಅಲ್ಲಿ ವಾಲಾಖ್ಯ ಎಂಬುವನು ಸ್ನೇಹಿತನಾದನು. ಅವನೊಡನೆ ಸದಾ ಇರುತ್ತಿದ್ದನು. ಹೀಗಿರಲು ಒಂದು ರಾತ್ರಿ ತನ್ನ ಪತ್ನಿ ದಮಯಂತಿಯನ್ನು ಮುದ್ದಾಡಿ ಸರಸ ಸಲ್ಲಾಪದಿಂದಿರುವ ಕನಸನ್ನು ಕಂಡನು. ಎಚ್ಚೆತ್ತು ಅವಳಿಗಾಗಿ ಶೋಕಿಸುತ್ತಿದನು.

'ನಲ್ಲೆ ನಳಿನಾಕ್ಷಿಯೇ, ಪ್ರೀತಿಯಿಂದ ಬಂದು ಕನಸಿನಲ್ಲಿ ಮಾತಾಡಿದೆ. ನಿನ್ನ ಕರುಣದ ನುಡಿಯ ಆಪ್ತತೆಗೆ ನಾನು ಕರಗಿ ಹೋದೆ, ಶಕ್ತಿ ಗುಂದಿದೆ. ಅಕಟಕಟಾ! ನನ್ನ ಹಂಬಲವನ್ನು ಆ ಮನ್ಮಥನೇ ಬಲ್ಲ' ಎಂದು ಕಾಮನ ಬಾಣಕ್ಕೆ ಈಡಾಗಿ ಹಲುಬುತ್ತಿದ್ದನು.

ಆ ಭ್ರಮಾ ನುಡಿಯನ್ನು ಕೇಳಿ ವಾಲಾಖ್ಯನು ಪಕಪಕನೆ ನಕ್ಕು, 'ಎಲೆ ಬಾಹುಕನೇ, ಯಾವ ಹೆಣ್ಣಿಗಾಗಿ ಶೋಕಿಸುತ್ತಿರುವೆ. ಕಂತೆಗೆ ತಕ್ಕ ಬೊಂತೆ! ಓಹೋ! ನೀನು ಅತಿ ಚೆಲುವ! ನಿನಗೆ ತಕ್ಕವಳಿರಬೇಕು ಆ ತರುಣಿ! ಈ ಲೋಕದಲ್ಲಿ ಕಾಮನಿಗೆ ಕಣ್ಣಿಲ್ಲ! ಅವನೊಬ್ಬ ಮರುಳ' ಎಂದು ಅಪಹಾಸ್ಯ ಮಾಡಿದನು.

ಅದನ್ನು ಸಹಿಸಿಕೊಳ್ಳುತ್ತ ಬಾಹುಕನು ತನ್ನನ್ನೇ ನೋಡಿಕೊಂಡು ಹುಸಿನಕ್ಕು 'ವಾಲಾಖ್ಯನೇ, ಬಹು ಹಿಂದೆ ಒಬ್ಬ ಬ್ರಾಹ್ಮಣನು ತನ್ನ ಸತಿಯನ್ನು ಅಗಲಿದ್ದು, ಅವನು ಆ ವಿರಹದಲ್ಲಿ ನನ್ನೊಡನೆ ತನ್ನ ಪ್ರೇಮಲಹರಿಯನ್ನು ಹೇಳಿಕೊಂಡಿದ್ದ. ಅದು ಇಂದು ಕನಸಿನಲ್ಲಿ ಕಂಡು ಭ್ರಾಂತಿಗೊಳಗಾಗಿ ನುಡಿದೆ. ಅದರಲ್ಲಿ ತಪ್ಪೇನಿದೆ? ನನಗೆ ಹೆಂಡತಿ ಮಕ್ಕಳು ಇಲ್ಲ' ಎಂದು ಹೇಳಿದನು.

## ದಮಯಂತಿಯನ್ನು ಹುಡುಕಿಸಿ ತಂದ ಭೀಮನೃಪ

ಅರಸ ಧರ್ಮರಾಯನೇ ಕೇಳು. ಈ ರೀತಿ ಯಾರಿಗೂ ತಿಳಿಯದೆ ಇಲ್ಲಿ ನಳನು ಇರಲು, ಅಲ್ಲಿ ಭೀಮನೃಪನು ನಳನು ಜೂಜಿನಲ್ಲಿ ತನ್ನ ರಾಜ್ಯವನ್ನು ಸೋತದ್ದನ್ನು ಬ್ರಾಹ್ಮಣರಿಂದ ಕೇಳಿ ತಿಳಿದನು. ಮಗಳು ದಮಯಂತಿಯು ನಳನೊಡನೆ ಕಾಡಿಗೆ ತೆರಳಿದಳು ಎಂದು ಕೇಳಿ ತುಂಬಾ ವ್ಯಥೆಪಟ್ಟನು. ಶೋಕದಿಂದ, 'ಹಾ ಮಗಳೇ ದಮಯಂತಿ, ನೀನು ನಿಷಧ ರಾಜನ ಕೈ ಹಿಡಿದು ರಾಣಿಯಾಗಿ ಮೆರೆಯುವುದನ್ನು ವಿಧಿ ಸಹಿಸದೆ ಹೋಯಿತೇ? ನಿನ್ನನ್ನು ಕಾಡಿಗಟ್ಟಿತೇ? ಈ ಭೀಮನೃಪನ ಹೊಟ್ಟೆಯಲ್ಲಿ ಹುಟ್ಟಿದ ನಿನಗೆ ಆ ವಿಧಿ ರಾಜ್ಯ ಸಿರಿಯನ್ನು ಕೊನೆಗಾಣಿಸಿತೇ? ಓ ಮಗಳೇ, ನನಗೆ ಸಿರಿ ಬೆಳಗುವ ನಿನ್ನ ಕಮಲ ಮುಖ ಕಾಣುತ್ತಿಲ್ಲ. ನನ್ನ ಎದೆ ಮುಗುಳೇ, ಒಮ್ಮೆ ತೋರಿಸು' ಎಂದು ರೋದಿಸಿದನು.

## ಈ ಬಗೆಗೆ ತಂದುದೆ ವಿಧಿಯು ನಿನ್ನನ್ನು ಹರ ಮಹಾದೇವ

ಮಗಳ ಒಲ್ಮೆ, ಆಟ ಪಾಟ, ನಯ ವಿನಯ, ಮುದ್ದು ಮಾಟ, ಬೆಡಗು ಬಿನ್ನಾಣ; ಆ ಸುಂದರ ನಳದಮಯಂತಿ ಜೋಡಿಯನ್ನು ನೆನೆಯುತ್ತ ಅತಿನೊಂದು,

'ಮಗಳೇ, ನಿರಾಶೇಯಲ್ಲಿ ಮೋಹದ ಮಕ್ಕಳನ್ನು ಯಾರಿಗೆ ಕೊಟ್ಟು ಹೋದೆ? ವಿಧಿಯು ನಿನ್ನನ್ನು ಈ ಸ್ಥಿತಿಗೆ ದೂಡಿತೆ, ಹರ ಹರ ಮಹಾದೇವ! ಕಾಡಿನ ಕ್ರೂರ ಮೃಗಗಳಿಂದ ಏನಾದಳೋ? ಪತಿ ಅಗಲಿದನೋ ಏನೋ? ಭೂತ ಬೇತಾಳದ ವಶವಾದಳೋ?' ಎಂದು ಹಲವು ಬಗೆಯಲ್ಲಿ ಯೋಚಿಸುತ್ತ ಶೋಕಿಸಿದನು.

ದಮಯಂತಿಯ ತಾಯಿಯು ಮಗಳನ್ನು ನೆನೆದು, 'ಎಲೆ ತಾಯೆ, ಬಡವರ ಹೊಟ್ಟೆಯಲ್ಲಿ ಹುಟ್ಟಿ ಸುಖವನ್ನು ಪಡೆಯುವುದು ಬಿಟ್ಟು, ನೀನು ಏಕೆ ಈ ರಾಜನ ಹೊಟ್ಟೆಯಲ್ಲಿ ಹುಟ್ಟಿದೆ? ಅಂತಃಪುರದ ಸುಖದಲ್ಲಿ ಮೆರೆದ ನೀನು ಗೊಂಡಾರಣ್ಯದಲ್ಲಿ ಹೇಗೆ ಇರುವೆ?' ಎಂದು ಮರುಗಿದಳು.

ಈ ರೀತಿ ಸತಿಪತಿಗಳಿಬ್ಬರೂ ಶೋಕಿಸಿ, ನೋವನ್ನು ಸಹಿಸಲಾರದೆ ಅಗ್ನಿ ಪ್ರವೇಶ ಮಾಡಲು ತೀರ್ಮಾನಿಸಿ ಹೋಗುತ್ತಿದ್ದರು.

ಧರ್ಮರಾಜನೇ ಕೇಳು. ಅಷ್ಟರಲ್ಲಿ ಅವರಿಗೆ 'ಮತಿಯುತ ವಿವೇಕಿ ರಾಜನೇ ಚಿಂತೆಯನ್ನು ಬಿಡು. ಪತಿವ್ರತೆ ದಮಯಂತಿಗೆ ಹಾನಿಯಾಗುವುದೇ? ಅವಳು ಸುಖದಲ್ಲಿದ್ದಾಳೆ' ಎಂದು ನಭದಿಂದ ಅಶರೀರವಾಣಿ ಕೇಳಿಸಿತು.

ಅದನ್ನು ಕೇಳಿದ ವಿಪ್ರಸಮೂಹದಲ್ಲಿಯ ಒಬ್ಬ ಮುನಿಯು 'ಇದು ಪರಮಾನಂದಮಯನಾದ ಭಗವಂತನ ವಾಕ್ಯ. ದಮಯಂತಿ ಮತ್ತು ನಳನೃಪರು ಸುಖಕ್ಷೇಮದಿಂದಿರುವರು. ನೀವು ಇಂದು ಅವರನ್ನು ಹುಡುಕಲು ಗೂಢಚಾರರನ್ನು ಕಳುಹಿಸಿ' ಎಂದು ಹೇಳಿದನು.

ಆ ಮುನಿಯ ಮಾತಿನಂತೆ ಅರಮನೆಗೆ ಬಂದು ಗಾಢ ಚಿಂತೆಯಲ್ಲಿದ್ದಾಗ ಸೂರ್ಯನು ಪಶ್ಚಿಮಾಂಬುಧಿಗೆ ಇಳಿದನು. ಇಡೀ ರಾತ್ರಿ ಭೀಮರಾಜನಿಗೆ ಮುದ್ದುಮಗಳು ಮತ್ತು ಸತ್ಯಸಂಧಾ ಅಳಿಯನ ಚಿಂತೆ ಆವರಿಸಿ ನಿದ್ದೆ ಹತ್ತಲಿಲ್ಲ. ಅಷ್ಟರಲ್ಲಿ ಬೆಳಗಾಯಿತು. ರಾಜನು ಬ್ರಾಹ್ಮಣರನ್ನು ಕರೆಸಿ,

'ನೀವು ದಯಮಾಡಿ– ಈ ಧರೆಯಲ್ಲಿ ನನ್ನ ಮಗಳು ದಮಯಂತಿ ಮತ್ತು ನಳಮಹಾರಾಜ ಎಲ್ಲಿರುವರೆಂದು ಹುಡುಕಿ ಹೇಳಬೇಕು. ಹಾಗೆ ಅವರನ್ನು ಕಂಡು ಕರೆ ತಂದವರಿಗೆ ನನ್ನ ರಾಜ್ಯದ ಅರ್ಧಭಾಗವನ್ನು ನಿಶ್ಚಿತವಾಗಿ ಕೊಡುತ್ತೇನೆ' ಎಂದು ಹೇಳಿ ಉಪಚರಿಸಿ ಕಳುಹಿಸಿದನು.

ಅರಸನ ಗೂಢಚಾರರು ಪಶ್ಚಿಮ, ದಕ್ಷಿಣ, ಪೂರ್ವ ಸಮುದ್ರಗಳವರೆಗೆ ಮತ್ತು ಉತ್ತರದ ಕುರು ರಾಜ್ಯದವರೆಗೆ ನಳ ದಮಯಂತಿಯ ಹುಡುಕಾಟ ನಡೆಸಿದರು. ಅವರು ಹಲವಾರು ನಗರ, ಕಾಡು ಹಾದಿ, ಬೆಟ್ಟ ಗುಡ್ಡಗಳಲ್ಲದೆ ದಿಗಂತದವರೆಗೂ ಹುಡುಕುತ್ತ ಸಾಗಿದರು. ನಳ ಮತ್ತು ದಮಯಂತಿ ಪತ್ತೆ ಆಗಲಿಲ್ಲ. ಆದರೆ ಪ್ರಯತ್ನ ಬಿಡದೆ ಹಲವಾರು ದಿನಗಳು ಹುಡುಕಾಟ ನಡೆಸುತ್ತಲೇ ಇದ್ದರು. ಅವರು ಹೋದ ನಗರಗಳ ಬೀದಿಗಳ ಮಧ್ಯದಲ್ಲಿ, ನೆರೆದ ಸಭೆಗಳಲ್ಲಿ, ನಡೆವ ಮಾರ್ಗದಲ್ಲಿ ಸಂಚರಿಸುವವರನ್ನೆಲ್ಲಾ ಕಂಡು ಕೇಳುತ್ತ ಹೋದರು. ಎಲ್ಲಿಯೂ ಅವರ ಸುಳಿಹು ಸಿಗದಿರಲು, ಹುಡುಕುವ ಇನ್ನೂ ಹಲವು ಬಗೆಯ ಬಗ್ಗೆ ಚಿಂತಿಸುತ್ತ ಸಾಗುತ್ತಿದ್ದರು. ಅಂತಹವರಲ್ಲಿ ಮೂರು ಜನರು ಚೈದ್ಯನಗರಿಯನ್ನು ಸೇರಿದರು.

ಅಲ್ಲಿ ವಿಚಾರಿಸಲು ಅದು ಆ ರಾಜನ ಯಾಗ ಸಮಯವೆಂದು ತಿಳಿಯಿತು. ಆ ಮೂವರು ತಮಗೆ ದಕ್ಷಿಣೆಯ ಜೊತೆಗೆ ಭೂರಿ ಭೋಜನ ಸಿಗುವುದೆಂದು ಯಜ್ಞ ಮಂಟಪವನ್ನು ಹೊಕ್ಕರು.

## ಸುದೇವನು ಮನದೊಳನು ಮಾನಿಸಿದನೀ ಮಾನಿನಿ ಮಹಾಸತಿಯೆನುತ

ರಾಜನು ಬ್ರಾಹ್ಮಣರ ಮಂತ್ರ ಘೋಷದೊಡನೆ ಅಗ್ನಿಯನ್ನು ಆರಾಧಿಸುತ್ತಿದ್ದನು. ಆ ರಾಜನ ಮಗಳಾದ ಸುನೀತಿಯನ್ನು ದಮಯಂತಿಯು ಗೌರವದಿಂದ ಸೇವೆಗೈಯುತ್ತಿದ್ದಳು. ಆ ಸೈರಂಧ್ರಿಯನ್ನು ಆ ಬ್ರಾಹ್ಮಣರಲ್ಲಿ ಒಬ್ಬನಾದ ಸುದೇವನು ನೋಡಿದನು. ಮನಸ್ಸಿನಲ್ಲಿ ಆಕೆಯೇ ದಮಯಂತಿ ಇರಬೇಕೆಂದು ಅನುಮಾನಿಸಿದನು. ಆಕೆಯ ಗಾಂಭೀರ್ಯ ಗುಣ ಲಕ್ಷಣಗಳನ್ನು ಗಮನಿಸುತ್ತ ಆಕೆ ಮಹಾ ಪತಿವ್ರತೆಯೆಂದು ಕೊಂಡನು. ನೋಡ ನೋಡುತ್ತ ಅಚ್ಚರಿಗೊಳಗಾದನು.

ಆಭರಣಗಳನ್ನು ತೊರೆದು, ಮೈಲಿಗೆಯ ಸೀರೆಯುಟ್ಟು ಕೈಯನ್ನು ಗಲ್ಲಕ್ಕೆ ಆನಿಸಿ ನಿಂತ ದಮಯಂತಿಯನ್ನು ಸುದೇವನು ನೋಡಿದನು! ಅವಳು ಮೋಡ ಮುಸುಕಿದ ಚಂದ್ರಬಿಂಬವೋ, ಹಗಲು ಬೆಳಗುವ ದೀಪದ ಕಾಂತಿಯೋ, ಹೊಗೆ ಆವರಿಸಿದ ಚಿತ್ರ ಪ್ರತಿಮೆಯೋ ಎನ್ನುವಂತೆ ಕಾಣುತ್ತಿದ್ದಳು.

(ಸಶೇಷ)